# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.28/2025

Pw-04

Cw-05

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ವಿಜಯಕುಮಾರ ನಾಯಕ್ |
| ತಂದೇ:ಗಂಡನ ಹೆಸರುಃ | ಶ್ರೀ ರಂಗಪ್ಪ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಹಾರೋಗೊಪ್ಪ ತಾಃ ರಾಣೇಬೆನ್ನೂರು |

**ದಿನಾಂಕ:10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಆರೋಪಿತರು ಮತ್ತು ಪಿರ್ಯಾದಿ ಗೊತ್ತು. ಅವರೆಲ್ಲರೂ ನಮ್ಮೂರಿನವರು. ಪಿರ್ಯಾದಿ ಭರಮಪ್ಪನು ಹಿಂದೂ ತಳವಾರ ಜಾತಿಗೆ ಸೇರಿರುತ್ತಾರೆ. ಆದರೆ ಆರೋಪಿತರು ಹಿಂದೂ ಕುರುಬರ ಜಾತಿಗೆ ಸೇರಿರುತ್ತಾರೆ. ಈಗ್ಗೆ 11 ತಿಂಗಳ ಹಿಂದೆ ನಮ್ಮೂರಿನ ಒಬ್ಬ ಹುಡುಗ ಯಾವುದೋ ಒಂದು ಊರಿನ ಹುಡುಗಿಯನ್ನು ಕರೆದುಕೊಂಡು ಬಂದಿದ್ದನು. ಆಗ ನಮ್ಮೂರಿನ ಯಜಮಾನರು ಮಾತುಕತೆ ಮಾಡುತ್ತಿದ್ದರು. ಸದರಿ ಮಾತುಕತೆ ನಡೆಯುವಾಗ ನಾನು ಇರಲಿಲ್ಲ. ಸದರಿ ವಿಚಾರ ನನಗೆ ಕೇಳಿ ಗೊತ್ತಾಯಿತು.

2. ಅದೇ ದಿನ ಸಂಜೆ 7.00 ಗಂಟೆ ಸಮಯದಲ್ಲಿ ಪಿರ್ಯಾದಿ ಭರಮಪ್ಪ ಹನುಮಂತ ದೇವರ ಗುಡಿ ಹತ್ತಿರ ಕುಳಿತುಕೊಂಡಿದ್ದನು. ನಾನು ಅಡಿಕೆ-ಎಲೆ ತೆಗೆದುಕೊಂಡು ಅಲ್ಲಿಗೆ ಬಂದೆನು. ಆಗ ಆರೋಪಿತರು ಭರಮಪ್ಪನನ್ನು ಕಾಕಾ ಬಾ ಇಲ್ಲಿ ಎಂದು ಕರೆದರು. ಆಗ ಭರಮಪ್ಪನು ಆರೋಪಿತರ ಹತ್ತಿರ ಹೋದನು. ಆಗ 1 ನೇ ಆರೋಪಿ ಉಮೇಶ ಈತನು ಕಲ್ಲನ್ನು ತೆಗೆದುಕೊಂಡು ಭರಮಪ್ಪನ ತಲೆಗೆ ಹೊಡೆದನು. ಆಗ ಭರಮಪ್ಪನ ತಲೆ ಒಡೆದು ರಕ್ತ

ಬಂತು. ಆರೋಪಿತರು ಪಿರ್ಯಾದಿಗೆ ಏನನ್ನೂ ಅನ್ನಲಿಲ್ಲ. ಆಗ ರವಿ ಎಂಬ ವ್ಯಕ್ತಿಯು ಗಾಯಾಳು ಭರಮಪ್ಪನನ್ನು ಮೋಟಾರ್ ಸೈಕಲ್ ನಲ್ಲಿ ಹಲಗೇರಿ ಪೊಲೀಸ್ ಠಾಣೆಗೆ ಹೋದರು. ನಂತರ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಭರಮಪ್ಪನನ್ನು ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲುಮಾಡಿದರು. ಪೊಲೀಸರು ನಮ್ಮೂರಿಗೆ ಬಂದು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಆರೋಪಿತರು ಪಿರ್ಯಾದಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ಪೊಲೀಸರು ಕಲ್ಲನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದ ಕಾರಣ ಕೋರಿಕೆಯ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.